ಶ್ರೀ ಗುರು ರಾಘವೇಂದ್ರ ಸಹಕಾರ ಬ್ಯಾಂಕ್ ನಿಯಮಿತ
SRI GURU RAGHAVENDRA SAHAKARA BANK NIYAMITHA
# 15, Subbarama Chetty Road, Nettakallappa Circle, Basavanagudi, Bangalore - 560 004.
Phone : 26620380, 26620379 ■ Fax : 080-26506895 ■ E-mail : sgrsbn.bank@gmail.com
Website : www.raghavendrabank.com

**SGR/MS/H-106/2542/2023-24** **Date: 21-02-2024**

Respected Depositors,

**Sub: Changes in the conditions of repayment /Renewal of FD / Term Deposits with immediate effect.**

The conditions of repayment /Renewal of FDs / Term Deposits with our Bank have been changed with immediate effect. The revised conditions are given here below:

1. Interest ceases from maturity date. Please present this duly discharged certificate for renewal / payment on the due date.
2. The Receipt is not transferrable by endorsement.
3. In Case of discrepancy, please contact Branch Manager within 7 days of issue of this deposit receipt.
4. Interest will be compounded on quarterly basis for Re-Investment of Deposit.
5. The Bank will be paying the interest applicable to Savings Bank rate from the date of maturity till the date of renewal, if the Deposit is not renewed on the maturity date. However, SB rate of interest will not be paid if the Deposit is renewed within 7 days after maturity of the Deposit.
6. In case of premature closure of deposit, interest shall be paid as per Bank rules i.e. applicable interest rate for the period for which it is run, subject to penalty provision of the Bank.
7. TDS will be deducted as and when applicable unless otherwise eligible to be exempt as per the Income tax rules i.e., submission of 15G / 15H form.

*Example for condition No.5:*

If Mr. A has a FD which will be maturing on 01-03-2024. If he comes before 7th of March, his FD will be renewed from 01-03-2024, however, for the broken period of 7 days he will not get SB rate of interest. If Mr A comes to branch on 15th of March for renewal, his deposit will be renewed from 15th March only, however, he gets SB rate of interest for 14 days.

The above revised conditions are already incorporated in the new / revised FD receipts.

The respected depositors requested to continue to patronise our Bank.

27/02/2024

Bhaskar Hande
**(Administrator)**

SGRS BANK NIYAMITHA

# ಶ್ರೀ ಗುರು ರಾಘವೇಂದ್ರ ಸಹಕಾರ ಬ್ಯಾಂಕ್ ನಿಯಮಿತ
# SRI GURU RAGHAVENDRA SAHAKARA BANK NIYAMITHA

# 15, Subbarama Chetty Road, Nettakallappa Circle, Basavanagudi, Bangalore - 560 004.
**Phone : 26620380, 26620379 ■ Fax : 080-26506895 ■ E-mail : sgrsbn.bank@gmail.com**
**Website : www.raghavendrabank.com**


**SGR/MS/H-106/2542/2023-24** **ದಿನಾಂಕ : 21-02-2024**

ಗೌರವಾನ್ವಿತ ಠೇವಣಿದಾರರೇ,

**ವಿಷಯ: ನಿಶ್ಚಿತ ಠೇವಣಿಯ ಮರುಪಾವತಿ / ಅವಧಿಯ ಠೇವಣಿಗಳ ನವೀಕರಣದ ಷರತ್ತುಗಳನ್ನು ಈ ಕೂಡಲೇ ಜಾರಿಗೆ ಬರುವಂತೆ ಬದಲಾಯಿಸಲಾಗಿದೆ.**

ನಮ್ಮ ಬ್ಯಾಂಕ್‌ನಲ್ಲಿ ನಿಶ್ಚಿತ ಠೇವಣಿಯ ಮರುಪಾವತಿ / ಅವಧಿಯ ಠೇವಣಿಗಳ ನವೀಕರಣದ ಷರತ್ತುಗಳನ್ನು ಈ ಕೂಡಲೇ ಜಾರಿಗೆ ಬರುವಂತೆ ಬದಲಾಯಿಸಲಾಗಿದೆ. ಪರಿಷ್ಕೃತ ಷರತ್ತುಗಳನ್ನು ಈ ಕೆಳಗೆ ನೀಡಲಾಗಿದೆ:

1) ಠೇವಣಿಯ ಅವಧಿ ಮುಕ್ತಾಯದ ದಿನಾಂಕದಿಂದ ಬಡ್ಡಿ ಪಾವತಿಯು ನಿಲ್ಲುತ್ತದೆ. ಆದ್ದರಿಂದ ಸಹಿ ಮಾಡಿದ ನಿಶ್ಚಿತ ಠೇವಣಿಯ ಪ್ರಮಾಣ ಪತ್ರವನ್ನು / ರಸೀದಿಯನ್ನು ನಿಗದಿತ ದಿನಾಂಕದಂದು ನವೀಕರಣ / ಮರುಪಾವತಿಗಾಗಿ ಬ್ಯಾಂಕಿಗೆ ಹಾಜರುಪಡಿಸತಕ್ಕದ್ದು.
2) ನಿಶ್ಚಿತ ಠೇವಣಿಯ ರಶೀದಿಯನ್ನು ಅನುಮೋದನೆಯ ಮೂಲಕ ವರ್ಗಾಯಿಸಲಾಗುವುದಿಲ್ಲ.
3) ನಿಶ್ಚಿತ ಠೇವಣಿಯ ರಸೀದಿಯಲ್ಲಿ ಯಾವುದೇ ವ್ಯತ್ಯಾಸ ಕಂಡುಬಂದಲ್ಲಿ, ಸದರಿ ಠೇವಣಿ ರಸೀದಿಯನ್ನು ಪಡೆದ 7 ದಿನಗಳೊಳಗೆ ಶಾಖೆಯ ವ್ಯವಸ್ಥಾಪಕರನ್ನು ಸಂಪರ್ಕಿಸಬಹುದಾಗಿದೆ.
4) ಮರು ಹೂಡಿಕೆಯ ಠೇವಣಿಗಳಿಗೆ ತ್ರೈಮಾಸಿಕಕ್ಕೊಮ್ಮೆ ಬಡ್ಡಿಯನ್ನು ಸಂಯೋಜಿಸಲಾಗುತ್ತದೆ.
5) ನಿಶ್ಚಿತ ಠೇವಣಿಯು ಪಕ್ವಗೊಂಡ ದಿನಾಂಕದಂದು ಠೇವಣಿಯ ನವೀಕರಣವಾಗದಿದ್ದಲ್ಲಿ, ನಿಶ್ಚಿತ ಠೇವಣಿಯು ಪಕ್ವಗೊಂಡ ದಿನಾಂಕದಿಂದ ನವೀಕರಣದ ದಿನಾಂಕದವರೆಗೆ ಉಳಿತಾಯ ಖಾತೆಗೆ ಅನ್ವಯವಾಗುವ ಬಡ್ಡಿಯನ್ನು ಬ್ಯಾಂಕ್ ಪಾವತಿಸುತ್ತದೆ. ಆದರೆ, ಠೇವಣಿಯು ಪಕ್ವಗೊಂಡ ನಂತರ 7 ದಿನಗಳೊಳಗೆ ನವೀಕರಿಸಿದಲ್ಲಿ, ಉಳಿತಾಯ ಖಾತೆಗೆ ಅನ್ವಯವಾಗುವ ಬಡ್ಡಿ ದರವನ್ನು ಪಾವತಿಸಲಾಗುವುದಿಲ್ಲ.
6) ನಿಗದಿತ ಅವಧಿಗೂ ಮುನ್ನಾ ಠೇವಣಿಯನ್ನು ಮುಕ್ತಾಯಗೊಳಿಸುವ ಸಂದರ್ಭದಲ್ಲಿ, ಬ್ಯಾಂಕ್ ನಿಯಮಗಳ ಪ್ರಕಾರ ಬಡ್ಡಿಯನ್ನು ಪಾವತಿಸಲಾಗುತ್ತದೆ. ಅಂದರೆ, ಠೇವಣಿಯು ಸಕ್ರಿಯವಾಗಿದ್ದ ಅವಧಿಗೆ ಅನ್ವಯವಾಗುವ ಬಡ್ಡಿದರವನ್ನು ಪಾವತಿಸಲಾಗುವುದು. ಸದರಿ ಪಾವತಿಯು ಬ್ಯಾಂಕಿನ ದಂಡನೆಯ ನಿಬಂಧನೆಗೊಳಪಟ್ಟಿರುತ್ತದೆ.
7) ಆದಾಯ ತೆರಿಗೆ ನಿಯಮಗಳ ಪ್ರಕಾರ ತೆರಿಗೆ (ಟಿ.ಡಿ.ಎಸ್) ವಿನಾಯಿತಿ ಪಡೆಯಲು ಅರ್ಹವಿಲ್ಲದಿದ್ದಲ್ಲಿ ಅಥವಾ ಫಾರಂ 15ಜಿ / 15ಹೆಚ್ ಗಳನ್ನು ಸಲ್ಲಿಸದಿದ್ದಲ್ಲಿ, ತೆರಿಗೆಯನ್ನು (ಟಿ.ಡಿ.ಎಸ್) ಕಡಿತಗೊಳಿಸಲಾಗುತ್ತದೆ.

**ಷರತ್ತು ಸಂಖ್ಯೆ 5 ಕ್ಕೆ ಉದಾಹರಣೆ:**
ಶ್ರೀ 'ಎ' ಎಂಬುವರು ನಿಶ್ಚಿತ ಠೇವಣಿಯನ್ನು ಹೊಂದಿದ್ದು, ಅದು ದಿನಾಂಕ 01-03-2024 ರಂದು ಪಕ್ವಗೊಳ್ಳುತ್ತದೆ. ಅವರು ಮಾರ್ಚ್ 7 ರ ಒಳಗೆ ಬಂದರೆ, ಅವರ ಠೇವಣಿಯು 01-03-2024 ರಿಂದ ಅನ್ವಯವಾಗುವಂತೆ ನವೀಕರಿಸಲಾಗುತ್ತದೆ. ಆದರೆ, ಅವರು 7 ದಿನಗಳ ಅವಧಿಗೆ ಉಳಿತಾಯ ಖಾತೆಯ ಬಡ್ಡಿ ದರವನ್ನು ಪಡೆಯುವುದಿಲ್ಲ. ಶ್ರೀ 'ಎ' ರವರು ಮಾರ್ಚ್ 15 ರಂದು ನವೀಕರಣಕ್ಕಾಗಿ ಶಾಖೆಗೆ ಬಂದರೆ, ಅವರ ಠೇವಣಿಯನ್ನು ಮಾರ್ಚ್ 15 ರಿಂದ ಅನ್ವಯಿಸುವಂತೆ ನವೀಕರಿಸಲಾಗುತ್ತದೆ, ಆದರೆ, ಅವರು 14 ದಿನಗಳವರೆಗೆ ಉಳಿತಾಯ ಖಾತೆಯ ಬಡ್ಡಿದರವನ್ನು ಪಡೆಯುತ್ತಾರೆ.

ಮೇಲಿನ ಪರಿಷ್ಕೃತ ಷರತ್ತುಗಳನ್ನು ಈಗಾಗಲೇ ಹೊಸ / ಪರಿಷ್ಕೃತ ಠೇವಣಿ ರಸೀದಿಗಳಲ್ಲಿ ಅಳವಡಿಸಲಾಗಿದೆ. ಗೌರವಾನ್ವಿತ ಠೇವಣಿದಾರರು ನಮ್ಮ ಬ್ಯಾಂಕ್ ಅನ್ನು ಪ್ರೋತ್ಸಾಹಿಸುವುದನ್ನು ಮುಂದುವರಿಸಲು ವಿನಂತಿಸಲಾಗಿದೆ.

21/02/2024

ಭಾಸ್ಕರ್ ಹಂದೆ
**(ಆಡಳಿತಾಧಿಕಾರಿಗಳು)**

SGRS BANK NIYAMITHA BNG-4